ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗುಬ್ಬಿ

ಸಿ.ಸಿ.ನಂ.42/2023

| | | | |
|---|---|---|---|
| ಹೆಸರು | : | ಪ್ರಕಾಶ್ | ಸಿ .ಡಬ್ಲ್ಯೂ :5 |
| ತಂದೆ ಹೆಸರು | : | ರಂಗಸ್ವಾಮಯ್ಯ | ಪಿ .ಡಬ್ಲ್ಯೂ :4 |
| ವಯಸ್ಸು | : | 31 ವರ್ಷ | |
| ಉದ್ಯೋಗ | : | ವ್ಯಪಾರ | |
| ವಾಸಸ್ಥಳ | : | ತರ್ಟಿ ಗ್ರಾಮ ಕೊರಟಗೆರೆ ತಾಲ್ಲೂಕು | |

ಸಾಕ್ಷಿಯನ್ನು ದಿಃ11-08-2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ

ಚಾಸಾ -1 ಮತ್ತು 6 ಗೊತ್ತು .

ನಿಪಿ -2 ರಲ್ಲಿ ಸಾಕ್ಷಿಯು ತಮ್ಮ ಸಹಿಯನ್ನು ಗುರುತಿಸಿದ್ದಾರೆ ಅದನ್ನು ನಿಪಿ -2 (ಬಿ ) ಎಂದು ಗುರುತಿಸಲಾಯಿತು.

ದಿಃ 05-12-2022 ರಂದು ನಿಟ್ಟೂರಿನ ಚಾಸಾ -1 ರವರ ತೋಟದಲ್ಲಿ ಸಹಿ ಮಾಡಿದ್ದೇನೆ . ಆಗ ಸಮಯ ಬೆಳಗ್ಗೆ 8.30 ರಿಂದ 9.30 ಗಂಟೆಯಾಗಿತ್ತು . ಆರೋಪಿತರುಗಳು ಮತ್ತು ಚಾಸಾ -1 ರವರ ನಡುವೆ ನಡೆದಿದ್ದ ಗಲಾಟೆಯ ಸಂಬಂಧ ಪೊಲೀಸರು ಮಹಜರಿಗೆಂದು ಅಲ್ಲಿಗೆ ಬಂದಿದ್ದರು ಆ ಸಮಯ ಸಾಕ್ಷಿಯಾಗಿ ನಾನು ನಿಪಿ -2 ಕ್ಕೆ ಸಹಿ ಮಾಡಿದ್ದೇನೆ. ನಿಪಿ -2 ಕ್ಕೆ ನನ್ನೊಡನೆ ಚಾಸಾ -6 ರವರು ಸಹಿ ಮಾಡಿದ್ದಾರೆ . ನಿಪಿ -2 ರಡಿಯಲ್ಲಿ ಪೊಲೀಸರು ಮುಮಾ-1 ನ್ನು ವಶಪಡಿಸಿಕೊಂಡಿದ್ದಾರೆ .

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಪ್ರಾಜ್ಞ ಸಹಾಯಕ ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದು, ಅದರಂತೆ ಅನುಮತಿ ನೀಡಲಾಯಿತು.

ಪಾಟೀಸವಾಲುಃ ಸ ಸ ಅ ರವರಿಂದಃ-

ನಿಪಿ -2 ಕ್ಕೆ ಚಾಸಾ -1 ರವರು ಸಹಾ ನನ್ನ ಸಮಕ್ಷಮ ಸಹಿ ಮಾಡಿದ್ದಾರೆ ಎಂದರೆ ಸರಿ .

ಪಾಟೀಸವಾಲು: ಆರೋಪಿ ಪರ ವಕೀಲರಿಂದಃ-

ನಾನು ಚಾಸಾ -1 ರವರ ಸಂಬಂಧಿ ಎಂದರೆ ಸರಿ . ಯಾವ ಕಾರಣಕ್ಕೆ ತೋಟದ ಬಳಿ ಬಂದಿದ್ದಿರಿ ಎಂದರೆ ಸಾಕ್ಷಿಯು ಗಲಾಟೆ ನಡೆದಿದ್ದ ಕಾರಣ ಚಾಸಾ -1 ರವರಿಗೆ ಮಾತನಾಡಿಸಿ ಹೋಗೋಣಾ ಎಂದು ಬಂದಿದ್ದೆ ಎಂದು ಹೇಳಿದ್ದಾರೆ . ಚಾಸಾ -1 ರವರಿಗೆ ಸೇರಿದ ಸ್ವತ್ತಿನ ಸರ್ವೆ ನಂಬರ್ ಮತ್ತು ವಿಸ್ತೀರ್ಣ ಗೊತ್ತಿಲ್ಲ . ನಾನು ಹೇಳುವಂತೆ

ನಿಟ್ಟೂರಿನಲ್ಲಿ ಚಾಸಾ -1 ರವರಿಗೆ ಸೇರಿದ ಜಮೀನು ಇರುವುದಿಲ್ಲ, ಸದರಿ ಜಮೀನು ಸರ್ವೆ ನಂ. 213/5 ಆಗಿದ್ದು ರುದ್ರಾಣಮ್ಮರವರ ಹೆಸರಿನಲ್ಲಿದೆ ಎಂದರೆ ಸರಿಯಲ್ಲ . ಮೇಲೆ ಹೇಳಿದ ಮಹಜರು ಸ್ಥಳದ ಚಕ್ಕುಬಂದಿ ಗೊತ್ತಿಲ್ಲ .

ಪಂಚನಾಮೆಗೆ ಸಾಕ್ಷಿಯಾಗಿ ಹಾಜರಾಗಬೇಕೆಂದು ಪೊಲೀಸರು ನನಗೆ ನೋಟಿಸ್ ನೀಡಿಲ್ಲ . ಚಾಸಾ -6 ರವರ ತಂದೆಯ ಹೆಸರು ಗೊತ್ತಿಲ್ಲ . ನಾನು ಹೇಳುವಂತೆ ಪೊಲೀಸರು ತೋಟದ ಬಳಿಗೆ ಬಂದಿಲ್ಲ , ಯಾವುದೇ ಮಹಜರು ಮಾಡಿಲ್ಲ , ನಾನು ಠಾಣೆಯಲ್ಲಿ ನಿಪಿ -2 ಕ್ಕೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಪೊಲೀಸರು ಮುಮಾ -1 ನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಆ ದಿನ ಬೆಳಗ್ಗೆ 8.30 ರಿಂದ 9.30 ಗಂಟೆಯವರೆಗೆ ಪೊಲೀಸರು ಮಹಜರು ಬರೆದಿದ್ದಾರೆ . ನಿಪಿ -2 ರಲ್ಲಿ ಏನು ಬರೆದಿದೆ ಎಂದು ಪೊಲೀಸರು ನನಗೆ ಹೇಳಿದ್ದಾರೆ ನಂತರ ಸಹಿ ಮಾಡಿದ್ದೇನೆ. ಮಹಜರು ಸ್ಥಳದಲ್ಲಿ ನಾನು ಮತ್ತು ಚಾಸಾ -6 ರವರು ಮಾತ್ರವಿದ್ದೆವು , ಬೇರೆ ಗ್ರಾಮಸ್ಥರು ಇರಲಿಲ್ಲ .ನಾನು ಗ್ರಾಮದಿಂದ ಮಹಜರು ಸ್ಥಳಕ್ಕೆ ಬಂದಾಗ ಬೆಳಗ್ಗೆ 6.30 ಗಂಟೆಯಾಗಿತ್ತು . ನಾನು ಚಾಸಾ -1 ರವರ ಸಂಬಂಧಿಯಾಗಿರುವ ಕಾರಣ ಪ್ರಕರಣಕ್ಕಾಗಿ ಅವರಿಗೆ ಅನುಕೂಲವಾಗಲೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ -1 ಮತ್ತು ಆರೋಪಿತರುಗಳ ನಡುವೆ ಜಮೀನು ವಿಚಾರವಾಗಿ ಮನಸ್ತಾಪವಿತ್ತು ಆ ಕಾರಣ ಅವರು ಆರೋಪಿತರುಗಳ ವಿರುದ್ಧ ಈ ಪ್ರಕರಣ ದಾಖಲಿಸಿದ್ದಾರೆ , ನಾನು ಅವರಿಗೆ ಅನುಕೂಲವಾಗಲೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ:</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿದೆ , ಸರಿ ಇದೆ ಎಂದು ಒಪ್ಪಿದ್ದಾರೆ.

SD/-
(ಅನುಪಮ.ಡಿ )
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗುಬ್ಬಿ.